**ಶ್ರೀ ಎಸ್.ರವಿ ಮಾನ್ಯ ವಿಧಾನಪರಿಷತ್ ಸದಸ್ಯರು ಇವರ 72 ರಡಿ ನೀಡಿರುವ ಸೂಚನಾ ಪತ್ರದಲ್ಲಿನ ವಿಷಯಕುರಿತು.**

ರಾಜ್ಯದಲ್ಲಿಇತ್ತೀಚೆಗೆ ಸುರಿಯುತ್ತಿರುವ ಭಾರಿ ಮಳೆಯಿಂದ ಹಾಲಿನ ಇಳುವರಿ ಕುಸಿದಿರುವುದು ಮತ್ತು ದಿನವಿಡೀ ರಾಸುಗಳನ್ನು ಕೊಟ್ಟಿಗೆಯಲ್ಲೇ ಸಾಕಬೇಕಾದ ಪರಿಸ್ಥಿತಿ ಎದುರಾಗಿ ಹೈನುಗಾರರಿಗೆಆರ್ಥಿಕ ಹೊರೆ ಹೆಚ್ಚಾಗಿರುವುದರಿಂದ ಹೈನುಗಾರರಆರ್ಥಿಕ ಪುನಶ್ಚೇತನಕ್ಕಾಗಿ ಹಾಲಿನ ದರವನ್ನು ಹೆಚ್ಚಳ ಮಾಡುವ ಬಗ್ಗೆ ಮತ್ತು ಹೈನುಗಾರರಿಗೆ ವಿಶೇಷ ಧನ ನೀಡಿ ಹಾಲು ಉತ್ಪಾದಕರನ್ನು ಪ್ರೋತ್ಸಾಹಿಸುವ ಬಗ್ಗೆ

**ಉತ್ತರ**

ರಾಜ್ಯದಲ್ಲಿ 26 ಲಕ್ಷರೈತರು ಸದಸ್ಯರಿದ್ದು, ಅವರಲ್ಲಿ ಸರಾಸರಿ 10ಲಕ್ಷ ರೈತರು ಸಂಘಕ್ಕೆ ಹಾಲನ್ನುಸರಬರಾಜು ಮಾಡುತ್ತಿದ್ದಾರೆ. ಹೈನುಗಾರಿಕೆಗೆಅವಶ್ಯಕ ಪೂರಕ ಸೌಲಭ್ಯಗಳಾದ ಪಶುವೈದ್ಯಕೀಯ, ಕೃತಕಗರ್ಭಧಾರಣೆ, ಪಶು ಆಹಾರ ಪೂರೈಕೆ. ಮೇವು ಅಭಿವೃದ್ಧಿತರಬೇತಿ ಮುಂತಾದ ಸೌಲಭ್ಯಗಳನ್ನು ಒದಗಿಸುವುದರಜೊತೆಗೆ ಮೇವು ಕತ್ತರಿಸುವಯಂತ್ರ, ಹಾಲು ಕರೆಯುವಯಂತ್ರ ಹಾಗೂ ರಬ್ಬರ್ ಮ್ಯಾಟ್ ಮುಂತಾದ ಅನೇಕ ಸೌಲಭ್ಯಗಳನ್ನು ಕಹಾಮದ ಮೂಲಕ ನೀಡುತ್ತಿದೆ. ಕೊರೋನ ಮಹಾಮಾರಿಯಂತಹ ಸಂದರ್ಭದಲ್ಲೂಕೂಡ ಹಾಲು ಉತ್ಪಾದಕರಿಂದ ನಿರಂತರವಾಗಿ ಹಾಲು ಖರೀದಿಸುವುದರಜೊತೆಗೆಅವರಿಗೆಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಕೊರೋನಾ ಸಂದರ್ಭದ 2 ವರ್ಷಗಳಲ್ಲಿ ನಂದಿನಿ ಪಶು ಆಹಾರ ಮಾರಾಟ ಬೆಲೆಯಲ್ಲಿ ಪ್ರತಿಟನ್‌ಗೆ ರೂ.1500 ರಿಂದ ರೂ.2000 ರ ವರೆಗೆರಿಯಾಯಿತಿ ನೀಡಿದ್ದು, ಒಟ್ಟಾರೆ ರೂ.150.79 ಕೋಟಿಯಷ್ಟುರಿಯಾಯಿತಿಯನ್ನುನೀಡಲಾಗಿದೆ.

ಗ್ರಾಹಕರಿಂದ ಬರುವ ಪ್ರತಿ ಒಂದು ರೂಪಾಯಿಯಲ್ಲಿ 79 ಪೈಸೆಗಳನ್ನು ರೈತರಿಗೆ ನೀಡಲಾಗುತ್ತಿದ್ದು, ಪ್ರತಿ ದಿನ ಪಟ್ಟಣದಿಂದ ಹಾಲು ಉತ್ಪಾದಕರಿಗೆ ಸರಾಸರಿ 28 ಕೋಟಿ ರೂ.ಗಳ ಹಣವನ್ನುಗ್ರಾಮೀಣ ಹಾಲು ಉತ್ಪಾದಕರಿಗೆ ಈ ವ್ಯವಸ್ಥೆ ಮೂಲಕ ತಲುಪಿಸಲಾಗುತ್ತಿದೆ.

ಪ್ರಸ್ತುತ ಹಾಲು ಉತ್ಪಾದಕರಿಗೆ ಸರಾಸರಿ ರೂ.27.70 ಪ್ರತಿ ಲೀಟರಿಗೆ ನೀಡುತ್ತಿದ್ದು ಸರ್ಕಾರದ ರೂ.5/- ಪ್ರೋತ್ಸಾಹ ಧನ ಸೇರಿ ಸರಾಸರಿ ರೂ.32.70 ಪ್ರತಿ ಲೀಟರ್ ಹಾಲಿಗೆ ದೊರಕುತ್ತದೆ. ಇದಕ್ಕಾಗಿ 2022-23ನೇ ಸಾಲಿನ ಆಯವ್ಯಯದಲ್ಲಿ ರೂ.1200 ಕೋಟಿ ಅವಕಾಶ ಕಲ್ಪಿಸಿದ್ದು ತಹಲ್‌ವರೆಗೆ ರೂ.600 ಕೋಟಿ ಬಿಡುಗಡೆ ಯಾಗಿದ್ದು, ಈಗಾಗಲೇ ರೂ.492.78 ಕೋಟಿ ಮೊತ್ತವನ್ನು ಹೈನುಗಾರರಿಗೆ ಬಿಡುಗಡೆ ಮಾಡಲಾಗಿರುತ್ತದೆ.

ರಾಜ್ಯದಲ್ಲಿನ ಎಲ್ಲಾ ಹಾಲು ಒಕ್ಕೂಟಗಳ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳು ಸೆಪ್ಟೆಂಬರ್(2022) ಮೊದಲ ವಾರದಲ್ಲಿ ವಾರ್ಷಿಕ ಸಾಮಾನ್ಯಸಭೆಗಳು ನಡೆದಿದ್ದು, 'ನಂದಿನಿ' ಹಾಲಿನ ಮಾರಾಟದರವನ್ನು ಪ್ರತಿ ಲೀ.ಗೆ ರೂ.3/-ಹೆಚ್ಚಿಸುವಂತೆ ನಿರ್ಣಯಿಸಿರುತ್ತಾರೆ. ಕರ್ನಾಟಕ ಹಾಲು ಮಹಾಮಂಡಳದ ದಿನಾಂಕ 9-9-2022 ರಂದು ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಪ್ರತಿ ಲೀಟರ್ ಹಾಲಿಗೆ ಮಾರಾಟದರವನ್ನು ರೂ.3/- ರಷ್ಟು ಹೆಚ್ಚಿಸಿ ಪೂರ್ಣ ಮೊತ್ತವನ್ನು ರೈತರಿಗೆ ನೀಡಲು ನಿರ್ಣಯಿಸಿರುತ್ತಾರೆ. ಈ ಕುರಿತು ಕರ್ನಾಟಕ ಹಾಲು ಮಹಾಮಂಡಳ ಅಧ್ಯಕ್ಷರು ಹಾಲಿನ ಮಾರಾಟ ದರ ಪ್ರತಿ ಲೀಟರ್‌ಗೆ ರೂ.3/- ರಂತೆ ಹೆಚ್ಚಿಸಲು ತನ್ಮೂಲಕ ಪ್ರಸ್ತಾವನೆಯನ್ನು ರೈತರಿಗೂ ಕೂಡ ಹಾಲಿನ ದರ ಹೆಚ್ಚಿಸುವ ಪ್ರಸ್ತಾವೆಯನ್ನು ಸಹಮತ ಕೋರಿ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿರುತ್ತಾರೆ. ಈ ಕುರಿತು ಸರ್ಕಾರದ ಹಂತದಲ್ಲಿ ತೀರ್ಮಾನಿಸಬೇಕಾಗಿರುತ್ತದೆ.

(ಕ್ಯಾಪ್ಟನ್ ಡಾ.ಕೆ.ರಾಜೇಂದ್ರ ಭಾ.ಆ.ಸೇ.)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ನಿಧನದಲ್ಲಿ ಚರ್ಚೆ
ನಿ-72 ಕ್ರ-46 ದಿ:-13/9/22

## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ರವಿ, ರವರ ನಿಯಮ - 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ.**

**ಸೂಚನೆ :**

**ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಭಾರಿ ಮಳೆಯಿಂದ ಹಾಲಿನ ಇಳುವರಿ ಕುಸಿದಿರುವುದು ಮತ್ತು ದಿನವಿಡೀ ರಾಸುಗಳನ್ನು ಕೊಟ್ಟಿಗೆಯಲ್ಲೇ ಸಾಕಬೇಕಾದ ಪರಿಸ್ಥಿತಿ ಎದುರಾಗಿ ಹೈನುಗಾರರಿಗೆ ಆರ್ಥಿಕ ಹೊರೆ ಹೆಚ್ಚಾಗಿರುವುದರಿಂದ ಹೈನುಗಾರರ ಆರ್ಥಿಕ ಪುನಶ್ಚೇತನಕ್ಕಾಗಿ ಹಾಲಿನ ದರವನ್ನು ಹೆಚ್ಚಳ ಮಾಡುವ ಬಗ್ಗೆ ಮತ್ತು ಹೈನುಗಾರರಿಗೆ ವಿಶೇಷ ಸಹಾಯಧನ ನೀಡಿ ಹಾಲು ಉತ್ಪಾದಕರನ್ನು ಪ್ರೋತ್ಸಾಹಿಸುವ ಬಗ್ಗೆ.**

**ಹೇಳಿಕೆ:**

ಕಳೆದೆರಡು ತಿಂಗಳುಗಳಿಂದ ರಾಜ್ಯದಲ್ಲಿ ಭಾರಿ ಮಳೆಯಿಂದ, ಅನೇಕ ಕಡೆ ಅತಿವೃಷ್ಟಿಯಿಂದ ಜಲಾವೃತವಾಗಿರುತ್ತದೆ. ಇದರಿಂದಾಗಿ ಬೆಳೆ ನಾಶವಾಗಿ ಕೃಷಿ ತೀವ್ರ ಸಂಕಷ್ಟವನ್ನು ಎದುರಿಸುತ್ತಿದೆ. ಸಧ್ಯದ ಪರಿಸ್ಥಿತಿಯಲ್ಲಿ ರೈತರಿಗೆ ಹೈನುಗಾರಿಕೆಯೊಂದೇ ಆದಾಯದ ಮೂಲವಾಗಿರುತ್ತದೆ. ಮೇವಿಗೆ ಅಭಾವ ಸೃಷ್ಟಿಯಾಗಿದ್ದು, ಹಸುಗಳನ್ನು ಮಾರಾಟ ಮಾಡುವ ಪರಿಸ್ಥಿತಿ ಉದ್ಭವವಾಗಿರುತ್ತದೆ. ಹೈನುಗಾರರನ್ನು ಈ ಸಂಕಷ್ಟದಿಂದ ಹೊರತರಲು ಪ್ರತಿ ಲೀಟರ್ ಹಾಲಿಗೆ ಶೇಖರಣಾ ದರವನ್ನು ಹೆಚ್ಚಿಸುವುದು ಅಗತ್ಯವಿರುತ್ತದೆ. ಇದು ತೀರಾ ಅನಿವಾರ್ಯವಾಗಿರುತ್ತದೆ. ಕಳೆದೊಂದು ತಿಂಗಳಿನಿಂದ ಹಾಲು ಶೇಖರಣಾ ಪ್ರಮಾಣ ದಿನವಹಿ 6.55 ಲಕ್ಷ ಕೆ.ಜಿ.ಗಳಷ್ಟು ಕಡಿಮೆಗೊಂಡಿರುತ್ತದೆ. ಈ ಹಿಂದೆ, 2020ರ ಫೆಬ್ರವರಿ ಮಾಹೆಯಲ್ಲಿ ನಂದಿನಿ ಹಾಲಿನ ಮಾರಾಟ ದರವನ್ನು ಪ್ರತಿ ಲೀಟರ್‌ಗೆ ರೂ.2/-ರಷ್ಟು ಹೆಚ್ಚಳ ಮಾಡಲಾಗಿತ್ತು. ಈಗಾಗಲೇ ಹೆಚ್ಚಳ ಮಾಡಿ 2 1/2 ವರ್ಷಗಳು ಕಳೆದಿವೆ, ಈ ಎಲ್ಲಾ ಕಾರಣಗಳಿಂದ ಸಹಕಾರ ಹೈನೋದ್ಯಮವನ್ನು ಉಳಿಸಿಕೊಂಡು ಅಭಿವೃದ್ಧಿಪಡಿಸಬೇಕಾದರೆ, ಹಾಲು ಉತ್ಪಾದಕರಿಗೆ ಅತೀ ಶೀಘ್ರವಾಗಿ ಹಾಲಿನ ದರವನ್ನು ಹೆಚ್ಚಿಸುವುದು ಅನಿವಾರ್ಯವೆಂದು ರಾಜ್ಯಾದ್ಯಂತ ಜಿಲ್ಲಾ ಹಾಲು ಒಕ್ಕೂಟಗಳು 2021-22ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಚರ್ಚಿಸಿ ಕರ್ನಾಟಕ ಹಾಲು ಮಹಾಮಂಡಳಕ್ಕೆ ಈ ಬಗ್ಗೆ ಕೋರಿ ಕೊಂಡಿರುತ್ತವೆ. ಅದರಂತೆ ಕರ್ನಾಟಕ ಹಾಲು ಮಹಾಮಂಡಳದ ಅಧ್ಯಕ್ಷರು, ಹಾಲಿನ ಮಾರಾಟ ದರವನ್ನು ಪ್ರತಿ ಲೀ.ಗೆ ರೂ.3/- ಹೆಚ್ಚಿಸಲು ಸಹಮತ ನೀಡಲು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ದಿನಾಂಕ:09.09.2022 ರಂದು ನಡೆದ ಕರ್ನಾಟಕ ಹಾಲು ಮಹಾಮಂಡಳದ 2021-22ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಹಾಲು ಉತ್ಪಾದಕರಿಗೆ ಹೆಚ್ಚಿನ ದರ ನೀಡಬೇಕಾದಲ್ಲಿ ನಂದಿನಿ ಹಾಲಿನ ಮಾರಾಟ ದರವನ್ನು ಸಹ ಹೆಚ್ಚಿಸಿದಾಗ ಮಾತ್ರ ಸಾಧ್ಯವಾಗುತ್ತದೆಂದು ಅಭಿಪ್ರಾಯಿಸಿ, ಹಾಲಿನ ಮಾರಾಟ ದರವನ್ನು ಪ್ರತಿ ಲೀಟರ್‌ಗೆ ರೂ.3/- ರಂತೆ ಹೆಚ್ಚಿಸಿದಲ್ಲಿ, ಹಾಲಿನ ಶೇಖರಣೆ ದರವನ್ನು ಸಹ ರೂ.3/- ರಂತೆ ಹೆಚ್ಚಿಸುವ ಕುರಿತು ಸರ್ಕಾರದಲ್ಲಿ ಮನವಿಗಳು ಸ್ವೀಕೃತಗೊಳ್ಳುತ್ತಿದ್ದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

**ಇ- ಪಸಂಮೀ 200 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
**ಪಶುಸಂಗೋಪನೆ ಸಚಿವರು**